ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ ಶಿವಮೊಗ್ಗ ಜಿಲ್ಲೆಯ ಸೊರಬ ಹಾಗೂ ಇತರ ತಾಲ್ಲೂಕುಗಳಲ್ಲಿ ದರಖಾಸ್ತು ಜಮೀನನ್ನು ನೀಡುವುದರ ಬಗ್ಗೆ ನಿಷೇದಾಜ್ಞೆಯನ್ನು ಹೊರಡಿಸಿರುವ ವಿಚಾರದ ಕಡೆಗೆ ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

10-00 A.M.

(ii) Re :—orders prohibiting issue of lands on "Darkhast" in the Sorab Taluk etc., of Shimoga District.

SRI S. BANGARAPPA (SORAB).—Sir, I call the attention of the Minister for Revenue to the orders prohibiting the issue of lands on "Dharkhast" in Soraba Taluk and other taluks of Shimoga District.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ.—

ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಅಧಿಕ ಆಹಾರ ಉತ್ಪಾದನೆ ಮಾಡುವ ಕಾರ್ಯದಲ್ಲಿ ನೆರವನ್ನು ನೀಡುವ ಉದ್ದೇಶದಿಂದ ರಾಜ್ಯದ ನಾನಾ ಭಾಗಗಳಲ್ಲಿ ನದಿಗಳಿಗೆ ಅಣೆಕಟ್ಟೆಗಳನ್ನು ಹೇರಳವಾಗಿ ಹಣವ್ಯಯ ಮಾಡಿ ನಿರ್ಮಿಸಲಾಗಿದೆ ಮತ್ತು ನಿರ್ಮಿಸಲಾಗುತ್ತಿದೆ. ಹೀಗೆ ನಿರ್ಮಿಸಲಾಗಿರುವ ಅಣೆಕಟ್ಟೆಗಳಲ್ಲಿ ತುಂಗಭದ್ರಾ ಅಣೆಕಟ್ಟೆಯೂ ಒಂದು. ಯಾವ ಉದ್ದೇಶಕ್ಕಾಗಿ ಅಣೆಕಟ್ಟೆಯನ್ನು ನಿರ್ಮಿಸಲಾಗಿರೆಯೋ ಆ ಉದ್ದೇಶವು ಸಫಲವಾಗಬೇಕಾದರೆ ಅದನ್ನು ಸುರಕ್ಷಿತವಾಗಿಟ್ಟುಕೊಳ್ಳುವುದು ಅತ್ಯವಶ್ಯಕ. ಕಾರಣ ತುಂಗಭದ್ರಾ ಅಣೆಕಟ್ಟೆಗೆ ಬರುವ ನೀರಿನೊಂದಿಗೆ ಬಂದು ಶೇಖರಿತವಾಗುವ ಮಣ್ಣನ್ನು ಬಾಧಿಸದಂತೆ ತಡೆಯುವದಕ್ಕೋಸ್ಕರ ಮತ್ತು ತುಂಗಭದ್ರಾ ಅಣೆಕಟ್ಟೆಗೊಳಪಟ್ಟ ಪ್ರದೇಶದಲ್ಲಿ ಭೂ ಸವಕಳಿಯನ್ನು ತಡೆಯುವುದಕ್ಕಾಗಿ ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಯವರ ಮತ್ತು ಭೂ ಸಂರಕ್ಷಣಾಧಿಕಾರಿಯವರ ಕೋರಿಕೆಯ ಮೇರೆಗೆ ತುಂಗಭದ್ರಾ ಮಿಳುಗಡೆಯ ಪ್ರದೇಶದಲ್ಲಿಯ ಯಾವತ್ತೂ ಸರಕಾರಿ ಫಡ ಭೂಮಿಯನ್ನು ಅರಣ್ಯ ಖಾತೆಯವರಿಗೆ ಕಾಡು ಬೆಳೆಸಲು ವರ್ಗಾಯಿಸುವಂತೆ ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಧಾರವಾಡ ಮತ್ತು ರಾಯಚೂರು ಜಿಲ್ಲಾಧಿಕಾರಿಗಳಿಗೆ ದಿನಾಂಕ ೭ನೇ ಜನವರಿ ೧೯೭೨ರಂದು ಆದೇಶ ನೀಡಲಾಗಿದೆ. ಅದರಂತೆ ಸಂಬಂಧಪಟ್ಟ ಕಂದಾಯ ಇಲಾಖಾಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಮಾಡದೆ ಹೋದಲ್ಲಿ ಹೇರಳವಾಗಿ ಹಣ ವ್ಯಯಮಾಡಿ ನಿರ್ಮಿಸಲಾದ ಅಣೆಕಟ್ಟುಗಳಿಂದ ನಿರ್ದಿಷ್ಟ ಲಾಭಗಳು ದೊರೆಯದೆ ಹೋಗಬಹುದು.

ಆದರೆ ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ, ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅಂತಹ ಯಾವ ಜಮೀನೂ ಇರುವುದಿಲ್ಲವೆಂದು ಆಯಾ ತಹಶೀಲ್ದಾರರು ತಿಳಿಸಿರುವರು. ಸೊರಬ ತಾಲ್ಲೂಕಿನಲ್ಲಿ ಸುಮಾರು ಎಲ್ಲ ಸರಕಾರಿ ಫಡ ಜಮೀನು ತುಂಗಭದ್ರಾ ಜಲಮೂಲ ಪ್ರದೇಶದಲ್ಲಿ ಬರುವುದೆಂದು ತಿಳಿದು ಬಂದಿದೆ. ಕಾರಣ ಈ ತಾಲ್ಲೂಕಿನಲ್ಲಿಯ ಸರಕಾರಿ ಫಡ ಜಮೀನನ್ನು ಅರಣ್ಯ ಖಾತೆಗೆ ಕಾಡು ನೆಡುವುದಕ್ಕೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸರಕಾರದ ನೀರಾವರಿ ಯೋಜನೆಗಳಿಂದ ರೈತರಿಗೆ ಅಧಿಕ ಪ್ರಮಾಣದಲ್ಲಿ ಉಪಯೋಗವಾಗಬೇಕೆಂದರೆ ಅಣೆಕಟ್ಟೆಗಳನ್ನು ಸುರಕ್ಷಿತವಾದ ರೀತಿಯಲ್ಲಿ ನೋಡಿಕೊಳ್ಳುವುದು ಅಗತ್ಯ. ಆದ್ದರಿಂದ ತುಂಗಭದ್ರಾ ಅಣೆಕಟ್ಟೆಯ ಭದ್ರತೆಯ ದೃಷ್ಟಿಯಿಂದ, ತುಂಗಭದ್ರಾ ಪ್ರದೇಶದಲ್ಲಿ ವ್ಯವಸಾಯ ಯೋಗ್ಯವಲ್ಲದ ಸರಕಾರಿ ಫಡ ಜಮೀನನ್ನು ಕಾಡು ಬೆಳೆಸಲು ಅರಣ್ಯ ಖಾತೆಗೆ ವರ್ಗಾಯಿಸುವುದು ಸೂಕ್ತವೆಂದು ಸರಕಾರ ಭಾವಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ತಾವು ಹೇಳಿದ್ದೀರಿ ವ್ಯವಸಾಯಕ್ಕೆ ಯೋಗ್ಯವಲ್ಲದ ಸರ್ಕಾರಿ ಫಡ ಭೂಮಿಯನ್ನು ಕಾಡು ಬೆಳೆಸುವುದಕ್ಕೆ ಕೊಡುತ್ತೇವೆ ಎಂದು. ನಾವು ಪದೇಪದೇ ಸರ್ಕಾರವನು ಕೇಳುತ್ತಿದ್ದೇವೆ. ಮಲೆನಾಡು ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಒಂದು ಬೇಡಿಕೆ ಇದೆ. ಸಾಗುವಳಿಗೆ ಯೋಗ್ಯವಾಗಿರತಕ್ಕ ಪ್ರದೇಶ ಏನಿದೆ ಅದನ್ನು ಬಡವರಿಗೆ ಹಂಚಿಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂಬುದೇ ನಮ್ಮ ಬೇಡಿಕೆ. ಸಾಗುವಳಿಗೆ ಯೋಗ್ಯವಲ್ಲದ ಭೂಮಿ ಇದ್ದರೆ ಅದನ್ನು ಬೇಕಾದರೆ ಕಾಡು ಬೆಳೆಸುವುದಕ್ಕೆ ಬಿಡಿ. ನಿನ್ನೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ನದಿ ಎಲ್ಲಿ ಹರಿಯುವ

ತ್ತದೋ ಆದರ ಪಕ್ಕದಲ್ಲಿರತಕ್ಕ ಜಮೀನು ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಆದರೆ ಇವತ್ತು ಸೊರಬ ತಾಲ್ಲೂಕಿನಲ್ಲಿ ಸುಮಾರು ಎಲ್ಲ ಸರ್ಕಾರಿ ಫಡ ಜಮೀನು ತುಂಗಭದ್ರಾ ಜಲಮೂಲ ಪ್ರದೇಶದಲ್ಲಿ ಬರುವುದೆಂದು ತಿಳಿದುಬಂದಿದೆ, ಆದ್ದರಿಂದ ಅಲ್ಲಿ ಕಾಡು ನೆಡುವುದಕ್ಕೆ ಅರಣ್ಯ ಖಾತೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ರೀತಿ ಮಾಡುವುದಾದರೆ ಒಂದು ಗುಂಟೆ ಜಮೀನು ಕೂಡಾ ಕೊಡುವುದಕ್ಕಾಗುವುದಿಲ್ಲ. ತುಂಗಭದ್ರಾ ಅಣೆಕಟ್ಟು ಇರುವುದು ಬಳ್ಳಾರಿ ಜಿಲ್ಲೆಯಲ್ಲಿ. ಸೊರಬ ತಾಲ್ಲೂಕು ಶಿವಮೊಗ್ಗಾ ಜಿಲ್ಲೆಯಲ್ಲಿದೆ. ಯಾವ ಕಾರಣದಿಂದ ಈ ರೀತಿ ಮಾಡುತ್ತಿದ್ದಾರೋ ಅರ್ಥವಾಗುವುದಿಲ್ಲ, ಸಂಪೂರ್ಣವಾಗಿ ಇದರಿಂದ ಬಡವರಿಗೆ ತೊಂದರೆಯಾಗುವುದರಿಂದ ಇದೊಂದು ದೊಡ್ಡ ಪ್ರಶ್ನೆಯಾಗುತ್ತದೆ. ಬಡವರಿಗೆ, ನಿರ್ಗತಿಕರಿಗೆ ಇದರಿಂದ ತೊಂದರೆಯಾಗುವುದರಿಂದ ಈ ಕಾನೂನನ್ನು ಹಿಂದಕ್ಕೆ ತೆಗೆದುಕೊಂಡು ಬಡವರಿಗೆ ಜಮೀನು ಹಂಚುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಇದು ಅಷ್ಟು ಸುಲಭವಾದ ಪ್ರಶ್ನೆಯಲ್ಲ. ೧೯೫೩ರಲ್ಲಿ ತುಂಗಭದ್ರಾ ಯೋಜನೆ ಕಾರ್ಯಗತವಾಗಿ ಉಪಯೋಗಕ್ಕೆ ಬಂದಮೇಲೆ ೧೦-೧೫ ವರ್ಷದಲ್ಲಿ ಜಲಾಶಯದ ಒಳ ಭಾಗದಲ್ಲಿ ಹೆಚ್ಚು ಹೆಚ್ಚು ಅದುರು ಬರುತ್ತಾ ಇರುವುದನ್ನು ನೋಡಿ ಸಂಬಂಧಪಟ್ಟ ರಿವರ್ ವ್ಯಾಲಿ ಪ್ರಾಜೆಕ್ಟ್‌ನಲ್ಲಿ ಇದನ್ನು ತೆಗೆದುಕೊಂಡು ಕೇಂದ್ರ ಸರ್ಕಾರ, ಅದುರು ಮುಚ್ಚುತ್ತಾ ಇರುವುದನ್ನು ಪೂರಾ ತಪ್ಪಿಸುವುದಕ್ಕಾಗುವುದಿಲ್ಲ. ಬಹಳ ಭಾಗ ಮುಚ್ಚಿಹೋಗುವುದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಆವಶ್ಯಕ ಎಂದು ತಿಳಿದುದರಿಂದ ಕಾರ್ಯಕ್ರಮ ಕೈಗೊಂಡಿದೆ. ರಾಜ್ಯಸರ್ಕಾರಕ್ಕೆ ಅವರು ತಿಳಿಸಿದ ಮೇಲೆ ಯಾವ ಯಾವ ಪ್ರದೇಶದಿಂದ ನದಿಗೆ ನೀರು ಬರುತ್ತದೆ, ಅಲ್ಲಿ ಅದುರು ಬರುವುದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರ ೧೯೭೭ನೇ ಇಸವಿಯಲ್ಲಿ ಆಜ್ಞೆ ಮಾಡಿದೆ. ಆಮೇಲೆ ಮತ್ತೆ ಯಾವ ಯಾವ ಜಿಲ್ಲೆಯಲ್ಲಿ ಕೆಲವು ಭೂಮಿಯನ್ನು ಕೊಟ್ಟಿದ್ದಾರೆಂದರೆ ನನಗೆ ಬಂದಿರತಕ್ಕ ವರದಿ ಪ್ರಕಾರ ೨೭,೪೧೮ ಎಕರೆ ಭೂಮಿಯನ್ನು ಈಗ ಕಾಡು ನೆಡುವುದಕ್ಕೆ ಕೊಡಬೇಕು ಎಂದು ಅರಣ್ಯ ಇಲಾಖೆಗೆ ಕೊಟ್ಟಿದೆ. ೩,೯೮೪ ಎಕರೆ ಭೂಮಿ ವ್ಯವಸಾಯಕ್ಕೆ ಕೊಡಬಹುದೆಂದು ತಿಳಿಸಿದ್ದಾರೆ. ಇನ್ನೂ ಯಾವ ಯಾವ ಭಾಗದಲ್ಲಿ ವ್ಯವಸಾಯಕ್ಕೆ ಕೊಡಬಹುದು ಮತ್ತು ಕೊಡಬಾರದು ಎಂಬ ಬಗ್ಗೆ ತೀರ್ಮಾನ ಏನಾಗಿದೆ ಎಂದು ಅವರು ಈಗಾಗಲೇ ಚರ್ಚಿಸಿದ ಹಾಗೆ ಇರತಕ್ಕ ಅಂಕಿಅಂಶದಿಂದ ಗೊತ್ತಾಗುತ್ತದೆ. ಇದರ ಜೊತೆಗೆ ಅರಣ್ಯಕ್ಕೆ ಪೂರಾ ಪ್ರದೇಶ ಕೊಟ್ಟರೂ ಅದರಲ್ಲಿ ಸ್ವಲ್ಪ ಭಾಗ ಪ್ರದೇಶವನ್ನು ಯಾವ ಪ್ರದೇಶದಲ್ಲಿ ವ್ಯವಸಾಯಕ್ಕೆ ತೆಗೆದುಕೊಳ್ಳಬಹುದು ಎಂಬುದನ್ನು ತೀರ್ಮಾನ ಮಾಡಿ ವ್ಯವಸಾಯಕ್ಕೆ ಕೊಡುವ ಯೋಜನೆಯನ್ನು ಮಾಡಬಹುದು ಅದರೆ ಅದನ್ನೆಲ್ಲಾ ಪೂರಾ ತಪ್ಪಿಸಿ ವ್ಯವಸಾಯಕ್ಕೆ ಕೊಡಬಹುದು ಎಂದು ಹೇಳಿದರೆ ಮೂಲ ಉದ್ದೇಶಕ್ಕೇ ವಿರೋಧವಾಗುತ್ತದೆ, ಆ ಬಗ್ಗೆ ಸುಲಭವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಲೂಸ್ ಸಾಯಿಲ್ ಅಣೆಕಟ್ಟು ಪ್ರದೇಶಗಳಿಗೆ ಹೋಗುತ್ತಿದೆ ಎಂದು ಏನು ಹೇಳುತ್ತಿದ್ದಾರೆ ಅದು ಹೋಗುವುದು ಬಯಲು ಸೀಮೆಯಲ್ಲಿರುವ ಮಣ್ಣಿಗೆ. ಮಲೆನಾಡು ಪ್ರದೇಶದಲ್ಲಿ ಹೋಗುವುದಿಲ್ಲ. ನಮ್ಮದು ಲ್ಯಾಟರೇಟ್ ಸಾಯಿಲ್ ಪ್ರದೇಶವಾಗಿರುವುದರಿಂದ ಇಲ್ಲಿಂದ ಮಣ್ಣು ಹೋಗುವುದಿಲ್ಲ. ಆದ್ದರಿಂದ ದಯಮಾಡಿ ಸರ್ಕಾರದವರು ಪುನಃ ವಿಚಾರ ಮಾಡಿ ತಾಂತ್ರಿಕ ವರ್ಗದವರಿಂದ ಪುನಃ ಪರಿಶೀಲನೆ ಮಾಡುವುದಕ್ಕೆ ಕಳಿಸಿಕೊಡುತ್ತೀರಾ ? ಆ ರೀತಿ ಮಾಡಿ ಬಡವರಿಗೆ ಜಮೀನು ಹಂಚಿಕೆ ಸೌಲಭ್ಯ ಒದಗಿಸಿ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಮಲೆನಾಡು ಪ್ರದೇಶದಿಂದ ಮಣ್ಣು ಕೊಚ್ಚಿಹೋಗುವುದಿಲ್ಲ ಎಂದು ಹೇಳಿದರೆ ತಕ್ಷಣ ಅದನ್ನು ನಂಬುವ ಪರಿಸ್ಥಿತಿಯಲ್ಲಿಲ್ಲ. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತದೆ. ಬಯಲು ಸೀಮೆಯಲ್ಲೂ ಲೂಸ್ ಸಾಯಿಲ್ ಇದೆ. ಅಲ್ಲಿ ಮಳೆಗಾಲ ಕಡಿಮೆ ಇರುತ್ತದೆ. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತದೆ. ಮಾನ್ಯ ಸದಸ್ಯರು ಬಯಲು ಸೀಮೆಯಲ್ಲಿ ಹೆಚ್ಚು ಮಣ್ಣು ಕೊಚ್ಚುತ್ತದೆ ಎಂದು ಸಲಹೆ ಮಾಡುತ್ತಿದ್ದಾರೆ. ಮತ್ತು ತಜ್ಞರಿಂದ ಮತ್ತೆ ನೋಡಿಸಿ ವ್ಯವಸಾಯಕ್ಕೆ ಕೊಡದೇ ಹೋದರೆ ಅನೇಕ ಬಡವರಿಗೆ ತೊಂದರೆಯಾಗುತ್ತದೆಂದೂ ಹೇಳಿದ್ದಾರೆ. ಮತ್ತೆ ವ್ಯವಸಾಯ ಇಲಾಖೆ ತಜ್ಞರನ್ನು ಮತ್ತು ಅರಣ್ಯ ಇಲಾಖೆ ತಜ್ಞರನ್ನು ಒಟ್ಟುಗೂಡಿಸಿ ಪರಿಶೀಲನೆ ಮಾಡಿ ಎಷ್ಟು ವ್ಯವಸಾಯಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಯೋಚನೆ ಮಾಡುವುದಕ್ಕೆ ನನ್ನ ಅಡ್ಡಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಅಣೆಕಟ್ಟಿಗೆ ಸಂಬಂಧಪಟ್ಟ ಇಂಜಿನಿಯರುಗಳನ್ನೂ ತಜ್ಞರ ಜೊತೆ ಸೇರಿಸಬೇಕು.

Closure of "Vishala Karnataka," Press

ಶ್ರೀ ಕೋಣಂದೂರು ಲಿಂಗಪ್ಪ.—ಮೊನ್ನೆ ದಿವಸ ಅಖಿಲ ಭಾರತ ಪತ್ರಿಕೋದ್ಯಮಿಗಳ ಮುಷ್ಕರ ನಡೆಯಿತು. ಅಂದಿನಿಂದ ವಿಶಾಲ ಕರ್ನಾಟಕ ಪತ್ರಿಕೆಯಂ‌ಮಾಲೀಕರೂ, ನವ್ಮ ರಾಜ್ಯ ಮಂತ್ರಿಮಂಡಲದ ಸದಸ್ಯರೂ ಆದ ಕೆ. ಎಚ್. ಪಾಟೀಲರು ಆ ಮುಷ್ಕರವನ್ನೇ ನೆಪ ಮಾಡಿಕೊಂಡು ನಿನ್ನೆ ಬೆಳಗ್ಗಿನಿಂದ ಆ ಪತ್ರಿಕಾಲಯಕ್ಕೆ ಬೀಗ ಮುದ್ರೆ ಹಾಕಿ ೨೦೦ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ್ದಾರೆ. ಆದ್ದರಿಂದ ನೌಕರರು ತೊಂದರೆಗೊಳಗಾಗಿದ್ದಾರೆ. ಕಾನೂನು ಪ್ರಕಾರ ಎರಡು ತಿಂಗಳು ನೋಟೀಸ್ ಕೊಟ್ಟು.....

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಸಾಧಾರಣವಾಗಿ ಯಾವುದಾದರೂ ಸಂಸ್ಥೆಯನ್ನು ಸ್ಥಾಪನೆ ಮಾಡಿದರೆ ಅದನ್ನು ಕೈಬಿಡುತ್ತಾ ಇರಲಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳ ಮಂತ್ರಿ ಕೆ. ಎಚ್. ಪಾಟೀಲರ ಘರ್ಷಣೆಯಿಂದಾಗಿ ಆ ಪತ್ರಿಕೆಗೆ ಕೊಡಬೇಕಾ ಸರ್ಕಾರದಿಂದ ಸಿಗ ಬೇಕಾದ ಸೌಲಭ್ಯಗಳು ಸಿಗದೇ ಇರುವುದರಿಂದ ಪತ್ರಿಕೆ ಮುಂಚ್ಚಿ ೨೦೦ ಜನ ನೌಕರರನ್ನು ಕೆಲಸದಿಂದ ತೆಗೆಯುವ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗಳಿಗೆ ಯಾರು ಉತ್ತರ ಕೊಡುತ್ತಾರೆ ? ಲೇಬರ್ ಮಿನಿಷ್ಟರ್‌ರವರ ಸಭೆಯಲ್ಲಿಲ್ಲ.

† ಶ್ರೀ ಕಾಗೋಡು ತಿಮ್ಮಪ್ಪ.—ಕಲ್ಲುಗುಂಡಿನಹಾಗೆ ಮಾನ್ಯ ಸಿದ್ದವೀರಪ್ಪನವರಿದ್ದಾರೆ. ಅವರು ಉತ್ತರ ಕೊಡಬಹುದು. ಮುಖ್ಯಮಂತ್ರಿಗಳು ಮತ್ತು ಕೆ. ಎಚ್. ಪಾಟೀಲರ ಘರ್ಷಣೆಯಿಂದಾಗಿ ಪತ್ರಿಕಾಲಯ ಮುಚ್ಚುವ ಪರಿಸ್ಥಿತಿ ಬಂದಿದೆ. ೨೦೦ ಜನ ಕೆಲಸಗಾರರು ಕೆಲಸ ಕಳೆದುಕೊಳ್ಳುವುದರಿಂದ ಅವರ ಕುಟುಂಬದವರೆಲ್ಲಾ ಅಂದರೆ ಸುಮಾರು ೧೦೦೦ ಜನರು ನಿರ್ಗತಿಕರಾಗುವ ಪರಿಸ್ಥಿತಿ ಬಂದಿದೆ. ಕರ್ನಾಟಕ ರಾಜ್ಯದ ಪತ್ರಿಕಾ ಕ್ಷೇತ್ರದಲ್ಲಿ ಇದು ಒಂದು ದೊಡ್ಡ ಆತಂಕಕಾರಿಯಾದ ವಿಚಾರವಾಗಿದೆ. ಆದ್ದರಿಂದ ಸರ್ಕಾರದವರು ಸಾರ್ವಜನಿಕರು ಎಲ್ಲರೂ ಈಗ ಈ ಪತ್ರಿಕೆಗಳ ಬಗ್ಗೆ ಒಂದು ಹೇಳಿಕೆ ಕೊಡ ಬೇಕೆಂದಿದ್ದಾರೆ. ಎಲ್ಲಾ ಪತ್ರಿಕೆಗಳಿಗೂ ಸರ್ಕಾರದವರು ಜಾಹಿರಾತನ್ನು ಕೊಡುವ ರೀತಿಯಲ್ಲಿ ಈ ಪತ್ರಿಕೆಗೂ ಕೊಟ್ಟಿದ್ದರೆ ಇವತ್ತು ಇಂತಹ ಒಂದು ಸನ್ನಿವೇಶ ಉಂಟಾಗುತ್ತಿರಲಿಲ್ಲ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಶ್ರೀ ಕೆ. ಎಚ್. ಪಾಟೀಲ್‌ರವರಿಗೂ ಇರುವ ಭಿನ್ನಾಭಿಪ್ರಾಯವೇ ಮೂಲ ಕಾರಣವೆನ್ನಬಹುದು. ಇವತ್ತು ೨೦೦ ಜನ ಪತ್ರಿಕಾ ಕರ್ತರನ್ನು ಮನೆಗೆ ಕಳುಹಿಸುವ ವ್ಯವಸ್ಥೆಯಾಗಿದೆ ಎಂದು ಹೇಳುತ್ತಿದ್ದೇನೆ. ಅವರು ಇವತ್ತು ಆ ಪತ್ರಿಕೆಯನ್ನು ಪ್ರಾರಂಭ ಮಾಡಿದ್ದಾರೆಂಬ ಕಾರಣದಿಂದ ಅನೇಕ ಜನರ ಮಿಪ್ಪರು ಬೇರೆ ಪತ್ರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದವರು ಇವರ ಪತ್ರಿಕೆಗೆ ಬಂದು ಸೇರಿದರು. ಇವತ್ತು ಅಲ್ಲೂ ಕೆಲಸ ಕಳೆದುಕೊಂಡರು. ಇಲ್ಲೂ ಕೆಲಸ ಕಳೆದುಕೊಂಡರು. ಹೀಗಾದರೆ ನಿಜವಾಗಿ ಪತ್ರಿಕಾ ಕರ್ತರ ಪರಿಸ್ಥಿತಿ ಏನಾಗಬೇಕು ? ನನಗೆ ತಿಳಿದು ಬಂದಿರುವ ಹಾಗೆ ಪತ್ರಿಕೆಗಳಲ್ಲಿ ಕೆಲಸ ಮಾಡ ತಕ್ಕಂಥ ಜನರೇ ಈಗ ಬಹಳ ಕಡಿಮೆ ಇದ್ದಾರೆ. ಅವರು ಸಿಕ್ಕುವುದೇ ದುರ್ಲಭ. ಅಂತಹವರನ್ನು ಇವತ್ತು ಬೀದಿ ಪಾಲಾಗಿ ಮಾಡುವ ಪರಿಸ್ಥಿತಿ ಒದಗಿದೆ. ಇದಕ್ಕೆ ಸರ್ಕಾರ ಹಾಗೂ ಮುಖ್ಯಮಂತ್ರಿಯವರೇ ಜವಾಬ್ದಾರರು. ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಇದಕ್ಕೆ ಕಾರಣಭೂತರಾಗಿದ್ದಾರೆ. ಆದ್ದರಿಂದ ಇದನ್ನು ಸರ್ಕಾರ ಸೂಕ್ತ ರೀತಿಯಲ್ಲಿ ವಿಚಾರ ಮಾಡಿ ಆ ಜನರನ್ನು ಕೆಲಸದಲ್ಲಿ ತೊಡಗಿಸುವ ವ್ಯವಸ್ಥೆ ಮಾಡಬೇಕು. ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಶ್ರೀ ಕೆ. ಎಚ್. ಪಾಟೀಲರಿಗೂ ಇರುವ ಭಿನ್ನಾಭಿಪ್ರಾಯ ಇದಕ್ಕೆ ಮುಖ್ಯ ಕಾರಣವಲ್ಲ ಅಖಿಲ ಭಾರತ ಮಟ್ಟದಲ್ಲಿಯೇ ನಿನ್ನೆ ಒಂದು ದಿವಸ ಮಾತ್ರ ಅವರು ಮುಷ್ಕರ ಹೂಡಿದರು. ಅವರ ಕೋರಿಕೆಗಳು ಏನೆಂದರೆ ವೇಜ್‌ಬೋರ್ಡಿನವರ ಶಿಫಾರಸ್ಸುಗಳನ್ನು ಜಾರಿಗೆ ಕೊಡುವುದೇ ಒಂದು ಮುಖ್ಯವಾದ ಕೋರಿಕೆ. ಈ ಮುಷ್ಕರ ಎಲ್ಲಾ ಕಡೆ ನಡೆದಂತೆ ಅವರ ಪತ್ರಿಕೆಯಲ್ಲೂ ೧೬ನೇ ತಾರೀಖು ನಡೆಯಿತು. ೧೭ನೇ ತಾರೀಖು ಅಲ್ಲಿನ ಕೆಲಸಗಾರರು ಆ ಪತ್ರಿಕಾಲಯಕ್ಕೆ ಕೆಲಸಕ್ಕೆ ಹೋದಾಗ ಪ್ರೆಸ್ ಮುಚ್ಚಿತ್ತು. ೨೦೦ ಜನಗಳಿಗೆ ಕೆಲಸವಿಲ್ಲ. ಇದು ಬಹಳ ಸತ್ಯಕ್ಕೆ ದೂರವಾದ ವಿಚಾರವೇನೂ ಅಲ್ಲ. ಇವರ ವಿವಾದಗಳು ಈಗಾಗಲೇ ನಮ್ಮ ಮುಂದೆ ಇರುವಾಗ ಕಾನೂನಿಗೆ ಜಾಹಿರವಾಗಿ ಅದನ್ನು ಮುಂಚ್ಚುವುದಕ್ಕೆ ಹೊರಟಿದ್ದಾರೆ. ಇತರ ಪತ್ರಿಕೋದ್ಯಮಿ